# ಎಡಚರರ ಮ್ಯೂಸಿಯಂ

ಗೋವಾದಲ್ಲಿನ ‘ಬಿಗ್ ಫೂಟ್’ ಮ್ಯೂಸಿಯಂನಲ್ಲಿ ವಿಶ್ವಪ್ರಸಿದ್ಧ ಎಡಚರರ ಶಿಲ್ಪಗಳಿವೆ. ಗಾಂಧಿ, ಚಾಪ್ಲಿನ್, ಬಿಲ್ ಗೇಟ್ಸ್‌ರಿಂದ ಹಿಡಿದು, ಎಡಪಂಥೀಯರಿಂದ ‘ಬಲಪಂಥೀಯ’ ಎನ್ನುವ ಟೀಕೆ–ಟಿಪ್ಪಣಿಗೆ ಗುರಿಯಾಗುವ ಪ್ರಧಾನಿ ಮೋದಿ ಅವರೂ ಈ ಸಂಗ್ರಹಾಲಯದಲ್ಲಿ ಸ್ಥಾನ ಪಡೆದಿದ್ದಾರೆ.

■ ಎಚ್.ಎಸ್. ನವೀನಕುಮಾರ್ ಹೊಸದುರ್ಗ





ವಿಶ್ವದ ಮೇರು ವಿಜ್ಞಾನಿಗಳಲ್ಲಿ ಒಬ್ಬರಾದ ಐನ್‌ಸ್ಟೈನ್, ಮಹಾತ್ಮ ಗಾಂಧೀಜಿ, ಚಾರ್ಲಿ ಚಾಪ್ಲಿನ್ ಹಾಗೂ ಸಚಿನ್ ತೆಂಡೂಲ್ಕರ್ ಅವರ ನಡುವಿನ ಸಾಮ್ಯತೆಯೇನು?

ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದ ಈ ನಾಲ್ವರು ವ್ಯಕ್ತಿಗಳನ್ನು ಒಂದೇ ಸಾಲಿನಲ್ಲಿ ಗುರ್ತಿಸಲು ಮುಖ್ಯವಾದ ಕಾರಣ, ಇವರೆಲ್ಲ ಎಡಚರರೆನ್ನುವುದು.

‘ಎಡಚ’ ಎನ್ನುವ ಪದವೇ ನಮ್ಮ ಸಮಾಜದಲ್ಲಿ ವಿಚಿತ್ರ ಕಂಪನಗಳನ್ನು ಉಂಟು ಮಾಡುತ್ತದೆ. ಮಕ್ಕಳು ಎಡಗೈ ಬಳಸಿದರೆ ಪೋಷಕರಿಗೆ ಗಾಬರಿ. ಶೌಚದ ಸಂದರ್ಭದಲ್ಲಿ ಹೊರತುಪಡಿಸಿ, ಉಳಿದೆಲ್ಲ ಸಂದರ್ಭಗಳಲ್ಲಿ ಬಲಗೈಯನ್ನೇ ಕಡ್ಡಾಯವಾಗಿ ಬಳಸುವಂತೆ ತಾಕೀತು ಮಾಡುತ್ತಾರೆ. ಶುಭ ಸಂದರ್ಭಗಳಲ್ಲಂತೂ ಎಡಗೈ ಬಳಕೆ ಅಶುಭವವೆಂದು ಭಾವಿಸುವವರೂ ಇದ್ದಾರೆ. ಸತ್ಯಸಂಗತಿಯೆಂದರೆ, ಎಡಗೈ ಬಳಸುವುದು ಅಸಹಜವೂ ಅಲ್ಲ, ಅದು ಅಶುಭವೂ ಅಲ್ಲ.

ವಿಶ್ವದ ಹಲವು ಪ್ರಸಿದ್ಧನಾಮರು, ಅದ್ಭುತ ಸಾಧಕರು

(8ನೇ ಪುಟ ನೋಡಿ)